# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ದಾವಣಗೆರೆಯಲ್ಲಿ ಪ್ರಾರಂಭವಾಗಿರುವ ರಾಜ್ಯ ವಿಪತ್ತು ಸ್ಪಂದನಾ ಪಡೆಗೆ ಹುದ್ದೆಗಳನ್ನು ಮಂಜೂರು ಮಾಡುವ ಕುರಿತು.

**ಓದಲಾಗಿದೆ:**
1) ಸರ್ಕಾರದ ಆದೇಶ ಸಂಖ್ಯೆ:ಒಇ 174 ಕಆಸೇ 2018, ದಿನಾಂಕ: 21-03-2019
2) ಸರ್ಕಾರದ ಆದೇಶ ಸಂಖ್ಯೆ:ಒಇ 96 ಕಅಸೇ 2022, ದಿನಾಂಕ:26.04.2022
3) ಪತ್ರ ಸಂಖ್ಯೆ: 03/ಎಸ್‌ಡಿಆರ್‌ಎಫ್/2022-23, ದಿನಾಂಕ:04.05.2022

***

**ಪ್ರಸ್ತಾವನೆ:**

ಮೇಲೆ ಓದಲಾದ (1) ರ ಆದೇಶದಲ್ಲಿ ರಾಜ್ಯ ವಿಪತ್ತು ಸ್ಪಂದನಾ ಪಡೆಯ "ಎ" ಕಂಪನಿ, ಬೆಂಗಳೂರು, 'ಬಿ' ಕಂಪನಿ, ಮಂಗಳೂರು, "ಸಿ" ಕಂಪನಿ ಬೆಳಗಾವಿ ಮತ್ತು "ಡಿ" ಕಂಪನಿ, ಕಲಬುರಗಿಯಲ್ಲಿ ಒಂದು ಕಂಪನಿಗೆ 127 ಹುದ್ದೆಗಳಂತೆ ಒಟ್ಟು 508 ಹುದ್ದೆಗಳನ್ನು ಕೆಳಕಂಡಂತೆ ಸೃಜಿಸಲಾಗಿರುತ್ತದೆ.

| ಘಟಕ | ಒಂದು ಘಟಕಕ್ಕೆ ಅಧಿಕಾರಿ/ಸಿಬ್ಬಂದಿಗಳ ಸಂಖ್ಯೆ | ನಾಲ್ಕು ಘಟಕಗಳ ಅಧಿಕಾರಿ/ಸಿಬ್ಬಂದಿಗಳ ಸಂಖ್ಯೆ |
|---|---|---|
| ಕೆ.ಎಸ್.ಆರ್.ಪಿ | 25 | 100 |
| ಕೆ.ಎಸ್.ಐ.ಎಸ್.ಎಫ್ | 6 | 25 |
| ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ | 1 | 4 |
| ಅಗ್ನಿಶಾಮಕ ಇಲಾಖೆ | 30 | 119 |
| ಸಿವಿಲ್ ಪೊಲೀಸ್ ಸಿಬ್ಬಂದಿ | 37 | 150 |
| ವೈರ್‌ಲೆಸ್ ಘಟಕ | 3 | 10 |
| ಸಿ.ಎ.ಆರ್/ಡಿ.ಎ.ಆರ್ | 25 | 100 |
| **ಒಟ್ಟು** | **127** | **508** |

ಮೇಲೆ ಓದಲಾದ (2)ರ ಆದೇಶದಲ್ಲಿ 2022-23ನೇ ಸಾಲಿನ ಆಯವ್ಯಯ ಘೋಷಣೆ ಕಂಡಿಕೆ-383 ರಲ್ಲಿ ಘೋಷಿಸಿದಂತೆ ಪ್ರಕೃತಿ ವಿಕೋಪದ ಸಂದರ್ಭದಲ್ಲಿ ತುರ್ತು ಸ್ಪಂದನೆಗಾಗಿ ಕೇಂದ್ರ ಸರ್ಕಾರದ ನೆರವಿನೊಂದಿಗೆ ದಾವಣಗೆರೆಯಲ್ಲಿ ಒಂದು ಎಸ್‌ಡಿಆರ್‌ಎಫ್ ಕಂಪನಿಯನ್ನು ಸ್ಥಾಪಿಸುವುದಕ್ಕೆ ತಾತ್ವಿಕ ಅನುಮೋದನೆಯನ್ನು ನೀಡಿ ಆದೇಶಿಸಲಾಗಿದೆ.

ಅದರಂತೆ, ಮೇಲೆ ಓದಲಾದ (3) ರ ಪತ್ರದಲ್ಲಿ ಪೊಲೀಸ್ ಮಹಾ ಮತ್ತು ಮಹಾ ನಿರ್ದೇಶಕರು, ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆ ಇವರು ಮೇಲೆ ಓದಲಾದ (1)ರ ಆದೇಶದನ್ವಯ ದಾವಣಗೆರೆಯಲ್ಲಿ ರಾಜ್ಯ ವಿಪತ್ತು ಸ್ಪಂದನಾ ಪಡೆ ಕಂಪನಿಯನ್ನು ಕಾರ್ಯರೂಪಕ್ಕೆ ತರಲು 127 ಹುದ್ದೆಗಳು ಅತ್ಯವಶ್ಯಕವಾಗಿರುತ್ತದೆ ಎಂದು ತಿಳಿಸುತ್ತಾ ಈ ಕೆಳಕಂಡ ವಿವಿಧ 127 ಹುದ್ದೆಗಳನ್ನು ಸೃಜಿಸಿ ಸದರಿ ಹುದ್ದೆಗಳ ರಚನೆಗೆ ತಗುಲಬಹುದಾದ ಒಟ್ಟು ರೂ.5,64,18,360/- ಗಳ ವಾರ್ಷಿಕ ವೆಚ್ಚವನ್ನು ರಾಜ್ಯ ವಿಪತ್ತು ಸ್ಪಂದನಾ ಪಡೆಯ ಲೆಕ್ಕ ಶೀರ್ಷಿಕೆ:2070-00-108-1-02 ಅಡಿಯಲ್ಲಿ ಭರಿಸಲು ಮಂಜೂರಾತಿ ನೀಡುವಂತೆ ಕೋರಿರುತ್ತಾರೆ.

| ಘಟಕ | ಒಂದು ಘಟಕಕ್ಕೆ ಅಧಿಕಾರಿ/ಸಿಬ್ಬಂದಿಗಳ ಸಂಖ್ಯೆ |
|---|---|
| ಕೆ.ಎಸ್.ಆರ್.ಪಿ | 25 |
| ಕೆ.ಎಸ್.ಐ.ಎಸ್.ಎಫ್ | 6 |
| ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ | 1 |
| ಅಗ್ನಿಶಾಮಕ ಇಲಾಖೆ | 30 |
| ಸಿವಿಲ್ ಪೊಲೀಸ್ ಸಿಬ್ಬಂದಿ | 37 |
| ವೈರ್‌ಲೆಸ್ ಘಟಕ | 3 |
| ಸಿ.ಎ.ಆರ್/ಡಿ.ಎ.ಆರ್ | 25 |
| **ಒಟ್ಟು** | **127** |

...2

Scanned with CamScanner

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಲಾಗಿದೆ.

**ಸರ್ಕಾರದ ಆದೇಶ ಸಂಖ್ಯೆ:ಹೆಚ್‌ಡಿ 96 ಎಸ್‌ಎಫ್‌ಬಿ 2022**

**ಬೆಂಗಳೂರು, ದಿನಾಂಕ:02.06.2022**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ದಾವಣಗೆರೆಯಲ್ಲಿ ಪ್ರಾರಂಭವಾಗಲಿರುವ ನೂತನ ರಾಜ್ಯ ವಿಪತ್ತು ಸ್ಪಂದನಾ ಪಡೆಯ ಕಂಪನಿಗೆ ಈ ಕೆಳಕಂಡ 127 ಹುದ್ದೆಗಳನ್ನು ಸೃಜಿಸಿ ನಿಯೋಜನೆ ಮೇಲೆ ಭರ್ತಿ ಮಾಡಿಕೊಳ್ಳಲು ಮಂಜೂರಾತಿ ನೀಡಿ ಆದೇಶಿಸಿದೆ.

| ಘಟಕ | ಒಂದು ಘಟಕಕ್ಕೆ ಅಧಿಕಾರಿ/ಸಿಬ್ಬಂದಿಗಳ ಸಂಖ್ಯೆ |
|---|---|
| ಕೆ.ಎಸ್.ಆರ್.ಪಿ | 25 |
| ಕೆ.ಎಸ್.ಐ.ಎಸ್.ಎಫ್ | 6 |
| ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ | 1 |
| ಅಗ್ನಿಶಾಮಕ ಇಲಾಖೆ | 30 |
| ಸಿವಿಲ್ ಪೊಲೀಸ್ ಸಿಬ್ಬಂದಿ | 37 |
| ವೈರ್‌ಲೆಸ್ ಘಟಕ | 3 |
| ಸಿ.ಎ.ಆರ್/ಡಿ.ಎ.ಆರ್ | 25 |
| **ಒಟ್ಟು** | **127** |

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 148/ವೆಚ್ಚ-11/2022, ದಿನಾಂಕ: 30.05.2022 ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

Shyama Holla 2/6/22
(ಜಿ.ಶ್ಯಾಮ ಹೊಳ್ಳ)
ಸರ್ಕಾರದ ಅಧೀನ ಕಾರ್ಯದರ್ಶಿ
ಒಳಾಡಳಿತ ಇಲಾಖೆ, (ಪೊಲೀಸ್ ಸಹಾಯಕ ಸೇವೆಗಳು)

**ಇವರಿಗೆ**

1. ಪ್ರಧಾನ ಮಹಾ ಲೇಖಪಾಲರು (ಜಿ&ಎಸ್.ಎಸ್.ಎ), (ಇ&ಎಸ್.ಎಸ್.ಎ) ಮತ್ತು (ಎ&ಇ) ಕರ್ನಾಟಕ, ಹೊಸ ಕಟ್ಟಡ, "ಆಡಿಟ್ ಭವನ", ಅಂಚೆ ಪೆಟ್ಟಿಗೆ ಸಂಖ್ಯೆ:5398, ಬೆಂಗಳೂರು.
2. ಪೊಲೀಸ್ ಮಹಾ ನಿರ್ದೇಶಕರು ಹಾಗೂ ಮಹಾ ನಿರ್ದೇಶಕರು, ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆ, ನಂ.1, ಅಣ್ಣಾಸ್ವಾಮಿ ಮೊದಲಿಯಾರ್ ರಸ್ತೆ, ಬೆಂಗಳೂರು.
3. ಸರ್ಕಾರದ ಉಪ ಕಾರ್ಯದರ್ಶಿ ಹಾಗೂ ಆಂತರಿಕ ಆರ್ಥಿಕ ಸಲಹೆಗಾರರು, ಒಳಾಡಳಿತ ಹಾಗೂ ಸಾರಿಗೆ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
4. ನಿರ್ದೇಶಕರು, ಟಿಎನ್‌ಎಂಸಿ, ಖನಿಜ ಭವನ, ಬೆಂಗಳೂರು.
5. ಜಂಟಿ ನಿರ್ದೇಶಕರು/ಉಪ ನಿರ್ದೇಶಕರು, ರಾಜ್ಯ ಹುಜೂರು ಖಜಾನೆ, ಬೆಂಗಳೂರು.
6. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ಜಿಲ್ಲಾ ಪಂಚಾಯತ್), ವಿಧಾನಸೌಧ, ಬೆಂಗಳೂರು.



Scanned with CamScanner

**ಪ್ರತಿ:**

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ರವರ ಹಿರಿಯ ಆಪ್ತ ಕಾರ್ಯದರ್ಶಿ, ಒಳಾಡಳಿತ ಇಲಾಖೆ, ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ (ಪಿಸಿಎಎಸ್) ರವರ ಆಪ್ತ ಕಾರ್ಯದರ್ಶಿ, ಒಳಾಡಳಿತ ಇಲಾಖೆ, ವಿಧಾನಸೌಧ, ಬೆಂಗಳೂರು.
3. ಸರ್ಕಾರದ ಉಪ ಕಾರ್ಯದರ್ಶಿ (ಪೊಲೀಸ್ ಸಹಾಯಕ ಸೇವೆಗಳು ಮತ್ತು ಸಮನ್ವಯ) ರವರ ಆಪ್ತ ಸಹಾಯಕರು, ಒಳಾಡಳಿತ ಇಲಾಖೆ, ವಿಧಾನಸೌಧ, ಬೆಂಗಳೂರು.
4. ಸರ್ಕಾರದ ಅಧೀನ ಕಾರ್ಯದರ್ಶಿ(ಸಮನ್ವಯ), ಒಳಾಡಳಿತ ಇಲಾಖೆ ವಿಧಾನಸೌಧ, ಬೆಂಗಳೂರು.
5. ಶಾಖಾ ರಕ್ಷ ಕಡತ/ಹೆಚ್ಚುವರಿ ಪ್ರತಿಗಳು.

Scanned with CamScanner